ಸಾಕ್ಷಿಯನ್ನು ದಿಃ 01-10-2018 ರಂದು ಕರೆಯಿಸಿ ಪ್ರಮಾಣೀಕರಿಸಲಾಯಿತು.

ಪಾಟೀ ಸವಾಲುಃ ಶ್ರೀ ಎಮ್ ಎ ಪಿ ವಕೀಲರಿಂದಃ

ಈ ಕೇಸಿನಲ್ಲಿ ವಾದಿ ಜವಾಹರ ನನಗೆ ಅಣ್ಣನಾಗಬೇಕು. ಪ್ರತಿವಾದಿ 1, 2, 3,4 ಹಾಗೂ 5 ಇವರು ನನ್ನ ಅಕ್ಕನ ಮೊಮ್ಮಕ್ಕಳು. ವಾದಿ ಮತ್ತು ಪ್ರತಿವಾದಿಯರ ಹೆಂಡತಿ ಇವರು ಇಬ್ಬರು ಅಕ್ಕತಂಗಿಯರು. ವಾದಿ ಇವರು ಇದೆ ಕೇಸನ್ನು ನಡೆಸಲು ವಿಶೇಷ ಅಧಿಕಾರ ಪತ್ರ ಕೊಟ್ಟಿದ್ದರು ಎಂದರೆ ಸರಿ. ವಾದಿ ಈಗ ಬದುಕಿಲ್ಲ ಎಂದರೆ ಸರಿ. ವಾದಿ ಈಗ ಪೋತಿಯಾಗಿದ್ದಾರೆ ಎಂದರೆ ಸರಿ. ವಾದಿ ಈಗ ಬದುಕಿಲ್ಲದೆ ಇರುವುದರಿಂದ ಪ್ರಕರಣ ನಡೆಸಲು ಬರುವುದಿಲ್ಲ ಎಂದರೆ ಸರಿ ಅಲ್ಲ. ಹುಬ್ಬಳ್ಳಿಯಲ್ಲಿ ಕಪ್ಪುಬಸಿ ವ್ಯಾಪಾರ ಎಂದರೆ ಸರಿ. ವಾದಿ ಏನು ಮಾಡುತ್ತಿರಲಿಲ್ಲ. ನಮ್ಮ ಮನೆ ಹುಬ್ಬಳ್ಳಿಯ ಕಮರಿಪೇಟೆಯಲ್ಲಿ ಇದೆ. ವಾದಿ ವಾಸ ಮಾಡುತ್ತಿದ್ದ ಮನೆ ದುರ್ಗದ ಬಯಲಿನಲ್ಲಿ ಇದೆ. ವಾದಿ ಕೊಟ್ಟಂತಹ ಪವಾರ ಆಫ್ ಅಟಾರ್ನಿಯನ್ನು ನಾನು ನ್ಯಾಯಾಲಯಕ್ಕೆ ಹಾಜರು ಮಾಡಿದ್ದೇನೆ. ವಾದಿ ನನಗೆ 2014 ರಲ್ಲಿ ಕೊಟ್ಟಂತಹ ಅಧಿಕಾರ ಪತ್ರದ ಪ್ರಕಾರ ಅವರಿಗೆ 74 ವರ್ಷ ವಯಸ್ಸಾಗಿದೆ ಹಾಗೂ ಹೆಚ್ಚು ರಕ್ತದ ಒತ್ತಡ ಇದೆ, ಪಾರ್ಶುವಾಯು ಹೊಡೆದಿದೆ ಆದ್ದರಿಂದ ಹಾಸಿಗೆ ಇಡಿದಿದ್ದೇನೆ ಎಂದು ಹೇಳಿ ನನಗೆ ಅಧಿಕಾರ ಪತ್ರ ಕೊಟ್ಟಿದ್ದರು ಎಂದರೆ ಸರಿ ದಿಃ 16-8-2014 ರಂದು ನನಗೆ ವಾದಿ ಅಧಿಕಾರ ಪತ್ರ ಬರೆದುಕೊಟ್ಟಂತಹ ವ್ಯಕ್ತಿಯೇ ದಿಃ 27 ಮೇ 2014 ರಂದು ಈ ದಾವೆ ಮಾಡಿದ್ದಾರೆ ಎಂದರೆ ಸರಿ. ನನಗೆ ವಾದಿ ಬರೆದಕೊಟ್ಟಂತಹ ಅಧಿಕಾರದ ಪತ್ರದ ಆಧಾರದ ಮೇಲೆ ನಾನು ನಡೆದುಕೊಂಡಿಲ್ಲ ಎಂದರೆ ಸುಳ್ಳು. ದಾವಾ ಆಸ್ತಿ ಸುಮಿತ್ರಾಬಾಯಿ ಇವರ ತಂದೆಯಿಂದ ಬಂದಂತಹ ಆಸ್ತಿ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿ ಅಲ್ಲ. ಅದೆ ರೀತಿ ಗದಗ-ಬೆಟಗೇರಿ ಸಿ ಟಿ ಎಸ್ ನಂಃ 4271 ಇದು ಸುಮಿತ್ರಾಬಾಯಿ ಇವರಿಗೆ ಬಂದಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿ ಅಲ್ಲ. ಪ್ರತಿವಾದಿ 1, 2, 3, 4, 5 ಇವರು ಖೊಟ್ಟಿ ದಾಖಲೆ ಸೃಷ್ಟಿ ಮಾಡಿಕೊಂಡಿದ್ದಾರೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿ ಅಲ್ಲ. ಮೃತ್ಯು ಪತ್ರ ಇರುವುದು ಪೋತಿ ಆಸ್ತಿ ಬಿಟ್ಟು ಹೋಗಿದ್ದರೆ ವಹಿವಾಟ ನಡೆಸಲು ಮೃತ್ಯು ಪತ್ರ ಇರುತ್ತದೆ ಎಂದರೆ ಸರಿ ಅಲ್ಲ. ಮೃತ್ಯು ಪತ್ರ ಬರೆದುಕೊಟ್ಟಾಗ ಈ ಪ್ರಕರಣದಲ್ಲಿ ದಾವಾ ಆಸ್ತಿ ಇರಲಿಲ್ಲ ಎಂದರೆ ಸರಿ ಅಲ್ಲ. ಮೃತ್ಯು ಪತ್ರದಲ್ಲಿ ನಾನು ಈ ಹಿಂದೆ ಅಧಿಕಾರ ಪತ್ರ ಬರೆದುಕೊಟ್ಟಿದ್ದೆ ಈಗ ಮೃತ್ಯು ಪತ್ರ ಕೊಟ್ಟಿದ್ದೇನೆ ಹಿಂದಿನ ಅಧಿಕಾರ ಪತ್ರವನ್ನು ರದ್ದು ಮಾಡಿ ಎಂದು ಬರೆದಿಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

ಸಹಿಃ 01-010-2018
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು, ಗದಗ.